ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ
ನಂ. 09, 2ನೇ ಮಹಡಿ, 1ನೇ ಮುಖ್ಯರಸ್ತೆ, (ಹೊರವರ್ತುಲ ರಸ್ತೆ),ಕೆಂಗೇರಿ ಉಪನಗರ,ಬೆಂಗಳೂರು-60.

ಸಂಖ್ಯೆ : ಸ.ಇಂ/ವಾ-130/ವಾರ್ಡ್‌ಸಭೆ/2020-21 ದಿನಾಂಕ : 17/04/2021

## ವಾರ್ಡ್-130ರ ವಾರ್ಡ್ ಸಭೆಯ ನಡವಳಿ.

**ದಿನಾಂಕ: 17/04/2021 ರಂದು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿಯ ನಡುವಳಿಗಳು**

**ಸಭೆಯಲ್ಲಿ ಹಾಜರಿದ್ದ ಅಧಿಕಾರಿ ನೌಕರರು ಮತ್ತು ಸದಸ್ಯರುಗಳು:**

| ಕ್ರ ಸಂ | ಸದಸ್ಯರ ಹೆಸರು/ ಪದನಾಮ | ಪದನಾಮ | ದೂರವಾಣಿ ಸಂಖ್ಯೆ |
|---|---|---|---|
| 1 | ಶ್ರೀ ಮುತ್ತುರಾಜ್ | ಮುಖ್ಯ ಲೆಕ್ಕ ಪರಿಶೋಧನಾಧಿಕಾರಿಗಳು ನೋಡಲ್ ಅಧಿಕಾರಿ | 9880923954 |
| 2 | ಶ್ರೀ ಕೆ.ಎಂ. ಯಧುಕೃಷ್ಣ | ಸಹಾಯಕ ಇಂಜಿನಿಯರ್ ವಾರ್ಡ್-130 ಹಾಗೂ ಸದಸ್ಯ ಕಾರ್ಯದರ್ಶಿ | 9901050544 |
| 3 | ಶ್ರೀ ರಾಘವೇಂದ್ರ | ಸಹಾಯಕ ಅಭಿಯಂತರರುಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ | 9108027357 |
| 4 | ಶ್ರೀಮತಿ ರೂಪ ಎಂ | ಸಹಾಯಕ ಇಂಜಿನಿಯರ್ (ವಿ) ಆರ್.ಆರ್.ಬಡಾವಣೆ | 9449870366 |
| 5 | ಶ್ರೀ ನಾಗರಾಜು | ಕಿರಿಯ ಆರೋಗ್ಯ ಪರಿವೀಕ್ಷಕರು ಬಿ.ಬಿ.ಎಂ.ಪಿ | 9945886188 |
| 6 | ಶ್ರೀ. ಡಿ. ವಿನಯ್ | ಕಿರಿಯ ಆರೋಗ್ಯ ಪರಿವೀಕ್ಷಕರು ಬಿ.ಬಿ.ಎಂ.ಪಿ | 9880243077 |
| 7 | ಶ್ರೀ ಬಿ.ಪಿ. ಚಿಕ್ಕರಾಜು | ಸಂಚಾರಿ ಪೊಲೀಸ್ ಕೆಂಗೇರಿ ಪೊಲೀಸ್ ಠಾಣೆ | 9482088276 |
| 8 | ಶ್ರೀ ಬೋರಯ್ಯ | ಸಹಾಯಕ ಪೊಲೀಸ್ ಇನ್ಸ್‌ಪೆಕ್ಟರ್ ಜ್ಞಾನಭಾರತಿ ಪೊಲೀಸ್ ಠಾಣೆ | 9945757556 |
| 9 | ಶ್ರೀ ಜಯರಾಂ | ವಾರ್ಡ್ ಕಮಿಟಿ ಸದಸ್ಯರು | 9845408277 |
| 10 | ಶ್ರೀ ಶಶಿಕುಮಾರ್ ಕೆ.ಆರ್ | ವಾರ್ಡ್ ಕಮಿಟಿ ಸದಸ್ಯರು | 9916183333 |

Scanned with CamScanner

| | | | |
|---|---|---|---|
| 11 | ಶ್ರೀ ಕದರಪ್ಪ ಎನ್ | ವಾರ್ಡ್ ಕಮಿಟಿ ಸದಸ್ಯರು | 9845796985 |
| 12 | ಶ್ರೀ ಜಿ.ಸತ್ಯ | ವಾರ್ಡ್ ಕಮಿಟಿ ಸದಸ್ಯರು | 9740785505 |
| 13 | ಶ್ರೀಮತಿ ಪ್ರೇಮ ಎನ್ | ವಾರ್ಡ್ ಕಮಿಟಿ ಸದಸ್ಯರು | 96845733617 |
| 14 | ಶ್ರೀಮತಿ ಸಬೀಹ ಅಂಜುಮ್ | ವಾರ್ಡ್ ಕಮಿಟಿ ಸದಸ್ಯರು | 9844239162 |
| 15 | ಶ್ರೀ ಬಸವರಾಜು ಓ.ಎಂ | ವಾರ್ಡ್ ಕಮಿಟಿ ಸದಸ್ಯರು | 9886181525 |
| 16 | ಶ್ರೀ ಶ್ರೀನಿವಾಸ್ ಮೂರ್ತಿ ವಿ | ವಾರ್ಡ್ ಕಮಿಟಿ ಸದಸ್ಯರು | 9845518763 |
| 17 | ಶ್ರೀ ಪ್ರಕಾಶ್ | ವಾರ್ಡ್ ಕಮಿಟಿ ಸದಸ್ಯರು | 8105878004 |
| 18 | ಶ್ರೀ ರಾಮು | ಗುತ್ತಿಗೆದಾರರು<br>ಬೀದಿ ದೀಪ ನಿರ್ವಹಣೆ | 9164232782 |
| 19 | ಶ್ರೀ ಜಿ.ಮುನಿರಾಜು | ವಾರ್ಡ್ ಕಮಿಟಿ ಸದಸ್ಯರು | 9900595969 |
| 20 | ಶರಣಪ್ಪ ಅಂಗಡಿ | ವಾರ್ಡ್ ಕಮಿಟಿ ಸದಸ್ಯರು | 9880781644 |
| 21 | ಶ್ರೀ ಶ್ರೀಧರ್ ಮೂರ್ತಿ | ವಾರ್ಡ್ ಕಮಿಟಿ ಸದಸ್ಯರು | 9341444982 |
| 22 | ಶ್ರೀ ಅನಿಲ್ ಕುಮಾರ್ | ವಾರ್ಡ್ ಕಮಿಟಿ ಸದಸ್ಯರು | 9148844823 |

ವಾರ್ಡ್ ನಂ.130 ಉಲ್ಲಾಳ ವಾರ್ಡ್‌ನ ಸಹಾಯಕ ಇಂಜಿನಿಯರ್ ಹಾಗೂ ಸದಸ್ಯ ಕಾರ್ಯದರ್ಶಿಯವರು ಸಭೆಯಲ್ಲಿ ಹಾಜರಿದ್ದ ಅಧಿಕಾರಿ ನೌಕರರು ಮತ್ತು ವಾರ್ಡ್ ಕಮಿಟಿ ಸದಸ್ಯರನ್ನು ಸ್ವಾಗತಿಸಿದರು.

ನೋಡಲ್ ಅಧಿಕಾರಿಗಳು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ವಾರ್ಡಿನ ವ್ಯಾಪ್ತಿಯಲ್ಲಿ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರು ಮತ್ತು ವಾರ್ಡ್ ಕಮಿಟಿ ಸದಸ್ಯರುಗಳಿಂದ ಮಾಹಿತಿ ಪಡೆದರು.

ಸಭೆಯಲ್ಲಿ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿ ಅಗತ್ಯ ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು.

(1) ವಾರ್ಡ್ ಸಂಖ್ಯೆ:-130, ಉಲ್ಲಾಳು ಉಪನಗರ ವ್ಯಾಪ್ತಿಯಲ್ಲಿ ಕೋವಿಡ್-19 ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವುದರಿಂದ ನೋಡಲ್ ಅಧಿಕಾರಿಯವರು ಕೋವಿಡ್-19ರ ಸಾಂಕ್ರಾಮಿಕ ರೋಗದ ಬಗ್ಗೆ ಹಾಗೂ ಸರ್ಕಾರ ಮತ್ತು ಬಿ.ಬಿ.ಎಂ.ಪಿ. ವತಿಯಿಂದ ನೀಡುತ್ತಿರುವ ಸೌಲಭ್ಯ/ಸೌವಲತ್ತುಗಳು ಹಾಗೂ ಕೋವಿಡ್ ಪರಿವೀಕ್ಷಣೆಯಿಂದ ಮೊದಲುಗೊಂಡು ಆಸ್ಪತ್ರೆಗೆ

Scanned with CamScanner

ದಾಖಲಾಗುವವರೆಗೆ ಮತ್ತು ಕೋವಿಡ್–19 ಪರೀಕ್ಷೆಯ ಬಗ್ಗೆ ಸವಿಸ್ತಾರವಾಗಿ ಸಭೆಗೆ ವಿವರಿಸಿದರು. ಕೋವಿಡ್–19ರ ಪರೀಕ್ಷೆಯನ್ನು ಹೆಚ್ಚು ಮಾಡುವ ಬಗ್ಗೆ ಸಹಕರಿಸುವಂತೆ ಸಭೆಯಲ್ಲಿದ್ದ ಅಧಿಕಾರಿ ವರ್ಗದವರಿಗೆ ವಿನಂತಿಸಿ, ಆರೋಗ್ಯ ಪರಿವೀಕ್ಷಕರು ಮತ್ತು ಆರೋಗ್ಯಾಧಿಕಾರಿಗಳು ಸದರಿಯವರನ್ನು ಸಂಪರ್ಕಿಸಿ ಸಹಕಾರ ಪಡೆದುಕೊಳ್ಳಲು ಸೂಚಿಸಿದರು ಅಲ್ಲದೇ ಸುರಕ್ಷತಾ ಕ್ರಮ ವಹಿಸಿ ಮಾಸ್ಕ್ ಹಾಗೂ ಸ್ಯಾನಿಟೈಸರ್ ಖಡ್ಡಾಯವಾಗಿ ಉಪಯೋಗಿಸಲು ಸಭೆಯಲ್ಲಿ ತಿಳಿಸಿದರು.

(2) ಬ್ಲಾಕ್ ಸ್ಪಾಟ್‌ಗಳನ್ನು ತೆರವುಗೊಳಿಸುವುದರ ಬಗ್ಗೆ ಶ್ರೀ ನವೀನ್, ಆರೋಗ್ಯ ಪರಿವೀಕ್ಷ ರಿಗೆ ತಿಳಿಸಿದಾನ ಕಳೆದ ವಾರದಲ್ಲಿದಿಂದಲೇ ಇದರ ಬಗ್ಗೆ ಕ್ರಮಕೈಗೊಂಡಿರುವುದಾಗಿ ಸಭೆಯಲ್ಲಿ ತಿಳಿಸಿದರು.

(3) ಒಣಕಸ ಹಾಗೂ ಹಸಿಕಸ ಸಂಗ್ರಹಣೆಯ ಬಗ್ಗೆ ಏಕ ಕಾಲದಲ್ಲಿಯೇ ಸಂಗ್ರಹಿಸುವಂತೆ ತಿಳಿಸಿರುತ್ತಾರೆ.

(4) ಮ್ಯಾನ್‌ಹೋಲ್‌ಗಳ ತೊಂದರೆಯಾದಲ್ಲಿ ತಕ್ಷಣ ಕ್ರಮ ವಹಿಸುವಂತೆ ಸಭೆಯಲ್ಲಿ ಹಾಜರಿದ್ದ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಅಧಿಕಾರಿಯವರಾದ ಸಹಾಯಕ ಅಭಿಯಂತರರು ರವರಿಗೆ ತಿಳಿಸಲಾಯಿತು.

(5) ಬೋರ್‌ವೇಲ್‌ಗಳನ್ನು ಸರಿಯಾಗಿ ನಿರ್ವಹಣೆಮಾಡಿ ಸಾರ್ವಜನಿಕರಿಗೆ ನೀರು ಸರಬರಾಜು ಮಾಡುವಂತೆ ಗುತ್ತಿಗದಾರರಾದ ಶ್ರೀ ರವಿಚಂದ್ರ ರವರಿಗೆ (ಮೊ.ಸಂ. 9071712355) ರವರಿಗೆ ಸಭೆಯಲ್ಲಿ ಸೂಚಿಸಲಾಯಿತು.

(6) ಸಾರ್ವಜನಿಕರು ಸಭೆಯಲ್ಲಿ ತಮ್ಮ ಅನೇಕ ಕುಂದುಕೊರತೆಗಳನ್ನು ಸಭೆಯಲ್ಲಿ ತಿಳಿಸುತ್ತಿರುವುದರಿಂದ ಪಶುಸಂಗೋಪನೆ ವಿಷಯದ ಬಗ್ಗೆ ಮಾಹಿತಿ ನೀಡಲು ಪಶುವೈದ್ಯಾಧಿಕಾರಿ ರವರು ಮುಂದಿನ ಸಭೆಗೆ ತಪ್ಪದೇ ಹಾಜರಾಗಿ ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ಕ್ರಮವಹಿಸಲು ಸಭೆಯಲ್ಲಿ ಸೂಚಿಸಯಿತು. ಈ ಬಗ್ಗೆ ಸದರಿ ಅಧಿಕಾರಿರವರಿಗೆ ಪತ್ರದ ಮುಖೇನ ತಿಳಿಸಲು ನೋಡಲ್ ಅಧಿಕಾರಿಯವರು ಕಾರ್ಯದರ್ಶಿಯವರಿಗೆ ತಿಳಿಸಿದರು.

(7) ಜ್ಞಾನಭಾರತಿ 2ನೇ ಹಂತದಲ್ಲಿ ಅವೈಜ್ಞಾನಿಕವಾಗಿ ಅಳವಡಿಸಿರುವ ಟ್ರಾನ್ಸ್‌ಫಾರ್ಮರ್ ಕಂಬಗಳನ್ನು ಸಂಚಾರಕ್ಕೆ ತೊಂದರೆ ಆಗದಂತೆ ಸ್ಥಳಾಂತರಿಸಲು ಬೆಸ್ಕಾಂನ ಸಹಾಯಕ ಅಭಿಯಂತರರಿಗೆ

Scanned with CamScanner

ಸಭೆಯಲ್ಲಿ ತಿಳಿಸಲಾಯಿತು ಹಾಗೂ ಜ್ಞಾನಗಣಪತಿ ದೇವಸ್ಥಾನದ ಮುಂದೆ ಈಗಾಗಲೇ ತೆಗೆದಿರುವ ಗುಂಡಿಗಳನ್ನು ಮುಚ್ಚಲು ಕ್ರಮಕ್ಕೈಗೊಳ್ಳುವಂತೆ ಸೂಚಿಸಿದರು.

(8) ಸರ್ವೆ ನಂ.17ರಲ್ಲಿ ನಡೆಯುತ್ತಿರುವ ಕಾಮಗಾರಿಗಳನ್ನು ವಿಶಿಷ್ಟಗುಣಕ್ಕನುಗುಣವಾಗಿ ನಿರ್ವಹಿಸಲು ಸಭೆಯಲ್ಲಿ ಹಾಜರಿದ್ದ ಕಮಿಟಿ ಸದಸ್ಯರು ತಿಳಿಸಿರುವ ಮೇರೆಗೆ ಕ್ರಮ ವಹಿಸಲು ವಾರ್ಡ್‌ನ ಸಹಾಯಕ ಅಭಿಯಂತರರಿಗೆ ಸೂಚಿಸಲಾಗಿರುತ್ತದೆ.

ಅದರಂತೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರು ವಿಶಿಷ್ಟಗುಣಕ್ಕನುಗುಣವಾಗಿಯೇ ಕಾಮಗಾರಿಗಳನ್ನು ನಿರ್ವಹಿಸುತ್ತಿರುವುದಾಗಿ ತಿಳಿಸಿ ಕಾಮಗಾರಿಯಲ್ಲಿ ಯಾವುದೇ ಲೋಪದೋಷಗಳಿರುವುದಿಲ್ಲವೆಂದು ತಿಳಿಸಿದರು.

(9) ಭುವನೇಶ್ವರಿ ನಗರದಲ್ಲಿ ಬಹಳ ವರ್ಷಗಳ ಹಿಂದೆಯೇ ಅಳವಡಿಸಿರುವ ಒಳಚರಂಡಿಗಳು ಹಾಳಾಗಿದ್ದು, 7,6,9 & 4ನೇ ಅಡ್ಡರಸ್ತೆಯಲ್ಲಿ ಒಳಚರಂಡಿಗಳನ್ನು ಪುನರ್ ನಿರ್ಮಿಸಲು ವಾರ್ಡ್ ಕಮಿಟಿ ಸದಸ್ಯರಾದ ಶ್ರೀ ಶೇಖರ್ ರವರು ಕೋರಿರುತ್ತಾರೆ.
ಅದರಂತೆ ಅನುದಾನದ ಲಭ್ಯತೆಯ ಆಧಾರದ ಮೇಲೆ ಒಳಚರಂಡಿಗಳ ಪುನರ್ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳುವುದಾಗಿ ಸಭೆಯಲ್ಲಿ ಹಾಜರಿದ್ದ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಸಹಾಯಕ ಅಭಿಯಂತರರಾದ ಶ್ರೀ ರಾಘವೇಂದ್ರ ರವರು ಸಭೆಗೆ ಮಾಹಿತಿ ನೀಡಿರುತ್ತಾರೆ.

(10) ಈಗಾಗಲೇ ಬೇಸಿಗೆ ಕಾಲ ಇರುವುದರಿಂದ ಕುಡಿಯುವ ನೀರಿನ ಅಭಾವವನ್ನು ತಪ್ಪಿಸಲು ಕೋರಿಕೆ ಇರುವ ಬಡಾವಣೆಗಳಿಗೆ ನೀರಿನ ಟ್ಯಾಂಕರ್ ಮುಖಾಂತರ ಕುಡಿಯುವ ನೀರು ಸರಬರಾಜನ್ನು ಸಮರ್ಪಕವಾಗಿ ಒದಗಿಸಲು ಸಭೆಯಲ್ಲಿ ತಿಳಿಸಲಾಯಿತು ಅಲ್ಲದೇ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು ಈ ಕೆಳಗೆ ವಿವರಿಸಿರುವ ಸ್ಥಳಗಳಲ್ಲಿ ಕುಡಿಯುವ ನೀರಿನ ಅಭಾವ ಹೆಚ್ಚಾಗಿರುವುದರಿಂದ ಹೊಸದಾಗಿ ಕೊಳಬಾವಿಗಳನ್ನು ಕೊರೆಸಿ ಕುಡಿಯುವ ನೀರಿನ ಅಭಾವವನ್ನು ತಪ್ಪಿಸುವಂತೆ ತಿಳಿಸಿದರು.

ಕೊಳವೆ ಬಾವಿ ಕೊರೆಸಲು ಕೋರಿರುವ ಸ್ಥಳಗಳು: 1) ಶಿವು ಬಡಾವಣೆ 2) ಜ್ಞಾನಭಾರತಿ ಬಡಾವಣೆ 1ನೇ ಹಂತ (ಶ್ರೀನಿವಾಸ ಮೂರ್ತಿ) 3) ಜನತಾ ಕಾಲೋನಿ 4) ಭುವನೇಶ್ವರಿ ನಗರ 2ನೇ ಹಂತ 5) ಮಾರಮ್ಮನ ದೇವಸ್ಥಾನ ಚಿಕ್ಕಗೊಲ್ಲರಹಟ್ಟಿ

Scanned with CamScanner

ಅಂತಿಮವಾಗಿ ವಾರ್ಡ್‌ನ ಎಲ್ಲಾ ವಾರ್ಡ್ ಕಮಿಟಿಯ ಸದಸ್ಯರಗಳ ಮತ್ತು ವಿವಿಧ ಸಂಘ ಸಂಸ್ಥೆಗಳು ಜೊತೆಗೂಡಿ ಸಮನ್ವಯ ಸಾಧಿಸಿ ಕುಂದು ಕೊರತೆಗಳನ್ನು ಪರಿಹರಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಎಲ್ಲಾ ಅಧಿಕಾರಿ ವರ್ಗದವವರಿಗೆ ಸೂಚಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

K. M. Ellahi (signature)

(signature)
(ಮುತ್ತುರಾಜ್)
ಮುಖ್ಯ ಲೆಕ್ಕ ಪರಿಶೋಧನಾಧಿಕಾರಿಗಳು
ಹಾಗೂ ನೋಡಲ್ ಅಧಿಕಾರಿ,
ವಾರ್ಡ್‌ನಂ.130, ಉಲ್ಲಾಳ
ಕೆಂಗೇರಿ ಉಪ ವಿಭಾಗ
ಬಿ.ಬಿ.ಎಂ.ಪಿ.,ಬೆಂಗಳೂರು.

ಪ್ರತಿಯನ್ನು:

1) ವಲಯ ಆಯುಕ್ತರು ಹಾಗೂ ವಿಶೇಷ ಆಯುಕ್ತರು(ಆಡಳಿತ) ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ತರಲು ಅವರ ಆಪ್ತ ಸಹಾಯಕರಿಗೆ ಸಲ್ಲಿಸಿದೆ.
2) ಜಂಟಿ ಆಯುಕ್ತರು, ರಾಜರಾಜೇಶ್ವರಿನಗರ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮುಖ್ಯ ಅಭಿಯಂತರರು, ರಾಜರಾಜೇಶ್ವರಿನಗರ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ ರವರ ಮಾಹಿತಿಗಾಗಿ ಕಳುಹಿಸಿದೆ.
5) ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆಂ.ಉ.ವಿ/ ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ(ಯಶವಂತಪುರ) ರವರ ಮಾಹಿತಿಗಾಗಿ ಕಳುಹಿಸಿದೆ.
6) ಎಲ್ಲಾ ವಾರ್ಡ್ ಕಮಿಟಿ ಸದಸ್ಯರ ಮಾಹಿತಿಗಾಗಿ ಕಳುಹಿಸಿದೆ.
7) ಕಛೇರಿ ಪ್ರತಿ

Scanned with CamScanner